# ಓಲ್ಡ್ ಗ್ಲೋರಿ ಎಂಬ ಮರದ ಪುನರ್ಜನ್ಮದ ಕತೆ!

■ ಪ್ರಕಾಶ ಎಸ್. ಮನ್ನಂಗಿ

ಜಾನ್ ಕ್ವಿಗ್ಲಿ ಎಂಬ ಈ ಯುವಕ ಓಲ್ಡ್ ಗ್ಲೋರಿ ಎಂಬ ಮರವನ್ನೇರಿ ಎಪ್ಪತ್ತೊಂದು ದಿನಗಳು ಉರುಳಿವೆ. 2002ರ ನವಂಬರ್ ಒಂದರಂದು ಈ ಮರವನ್ನೇರಿ ಕುಳಿತಿದ್ದಾನೆ. ಮರದ ಮೇಲೊಂದು ಸಣ್ಣ ಅಟ್ಟವನ್ನು ನಿರ್ಮಿಸಿಕೊಂಡಿದ್ದಾನೆ. ಅವನ ಊಟ, ತಿಂಡಿ ಎಲ್ಲವೂ ಅಷ್ಟು ದಿನಗಳವರೆಗೆ ಅಲ್ಲಿಯೇ ನಡೆದಿದೆ. ಮರದಿಂದ ಅವನೆಂದೂ ಕೆಳಗಿಳಿದೇ ಇಲ್ಲ. ಸರಕಾರದವರೂ, ಪೊಲೀಸರೂ ಅವನನ್ನು ಮರದಿಂದ ಕೆಳಗಿಳಿಸಲು ಎಷ್ಟೊಂದು ಪ್ರಯತ್ನಿಸಿದರೂ ಅವನು ಅದಕ್ಕೊಪ್ಪಲಿಲ್ಲ. ಇವನೇಕೆ ಮರದಿಂದ ಇಳಿಯಲು ಒಪ್ಪುತ್ತಿಲ್ಲ ಎಂದು ನೀವು ಯೋಚಿಸುತ್ತಿರಬೇಕು ಅಲ್ಲವೇ? ನಿಮ್ಮ ಯೋಚನೆ ಸರಿಯಾಗಿದೆ. ಈಗ ಮುಂದಕ್ಕೆ ಓದಿ.

ಅಮೆರಿಕದ ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿ ಒಂದು ದೊಡ್ಡ ಓಕ್ ಮರವಿತ್ತು. ನಾಲ್ಕು ನೂರು ವರ್ಷಗಳಷ್ಟು ಹಳೆಯ ಈ ಮರ ಎಪ್ಪತ್ತು ಅಡಿ ಎತ್ತರ ಮತ್ತು ನೂರು ಅಡಿ ಅಗಲವಿತ್ತು. ಅಲ್ಲಿನ ಮಕ್ಕಳು, ಜನರು ಆ ಮರವನ್ನು ತುಂಬ ಪ್ರೀತಿಸುತ್ತಿದ್ದರು. ಅದನ್ನು ಓಲ್ಡ್ ಗ್ಲೋರಿ ಎಂದು ಕರೆಯುತ್ತಿದ್ದರು.

ಒಂದು ದಿನ ಬೆಳಗಿನ ಜಾವ ಅಲ್ಲಿನ ಜನರಿಗೆ ಬರಸಿಡಿಲೊಂದು ಬಂದೆರಗಿತು. ರಸ್ತೆಯೊಂದರ ನಿರ್ಮಾಣಕ್ಕಾಗಿ ಅವರ ಪ್ರೀತಿಯ ಓಲ್ಡ್ ಗ್ಲೋರಿ ಮರವನ್ನು ಕಡಿಯುವರೆಂಬ ಸುದ್ದಿ ಕಾಳ್ಗಿಚ್ಚಿನಂತೆ ಹರಡಿತು. ಜನರೆಲ್ಲ ಒಟ್ಟು ಸೇರಿದರು. 'ನಾವೆಲ್ಲ ಸರಕಾರಕ್ಕೆ ಮತ್ತು ಅಭಿವೃದ್ಧಿ ಮಂಡಳಿಗೆ ಅದರ ಪ್ರಯೋಜನ, ಅದರ ಮೇಲೆ ನಾವಿಟ್ಟಿರುವ ಪ್ರೀತಿಯನ್ನು ಮನವರಿಕೆ ಮಾಡಿಕೊಡೋಣವೆಂದು' ತೀರ್ಮಾನಿಸಿದರು.

ಮರುದಿನ ಸರಕಾರಕ್ಕೆ ಮತ್ತು ಅಭಿವೃದ್ಧಿ ಮಂಡಳಿಗೆ 'ಮರವನ್ನು ಕಡಿಯಬಾರದೆಂದೂ, ರಸ್ತೆಯ ನಿರ್ಮಾಣದ ದಿಕ್ಕನ್ನೇ ಬದಲಿಸಬೇಕೆಂದು' ವಿನಂತಿಸಿದರು. ಇದಾವುದನ್ನೂ ಸರಕಾರ ಕಿವಿಗೆ ಹಾಕಿಕೊಳ್ಳಲಿಲ್ಲ. ಅನಂತರವೂ ಕೆಲಸವನ್ನು ಮುಂದುವರಿಸಲು ಪ್ರಯತ್ನಿಸಿತು.

ಓಲ್ಡ್ ಗ್ಲೋರಿ ಮರವನ್ನು ಕಡಿಯುವರೆಂಬ ಸುದ್ದಿ, ಅದಕ್ಕೆ ಜನರು ಮಾಡಿದ ಮನವಿಗೆ ಸರಕಾರ ಕಿವಿಗೊಡದಿರುವ ಸುದ್ದಿ ಸುತ್ತೆಲ್ಲ ಹರಡಿತು. ಪರಿಸರವನ್ನು ತುಂಬ ಪ್ರೀತಿಸುತ್ತಿದ್ದ ವ್ಯಕ್ತಿಯೊಬ್ಬನಿಗೆ ಈ ಸುದ್ದಿ ತಲುಪಿತು. ಅವನು ಮರವನ್ನು ಹೇಗಾದರೂ ಮಾಡಿ ಉಳಿಸಬೇಕೆಂದು ಮನದಲ್ಲಿ ತೀರ್ಮಾನಿಸಿದ. ಅವನೇ ಜಾನ್ ಕ್ವಿಗ್ಲಿ.

ಜಾನ್ ಕ್ವಿಗ್ಲಿ ಜನರ ಸಹಕಾರದೊಂದಿಗೆ, ಮರವೇರಿ ವಿನೂತನ ಪ್ರತಿಭಟನೆಗಿಳಿದರು. ಅವರ ಊಟ, ತಿಂಡಿ, ನಿದ್ದೆ– ಎಲ್ಲವೂ ಮರದ ಮೇಲೆಯೇ ನಡೆಯುತ್ತಿತ್ತು. ಜನರೆಲ್ಲ ಮರದ ಕೆಳಗೆ ಟೆಂಟ್ ಹಾಕಿಕೊಂಡು ಕುಳಿತರು. ಜನರೆಲ್ಲ ನಿತ್ಯ ಅಲ್ಲಿ ಸೇರತೊಡಗಿದರು. ಪತ್ರಿಕೆ– ಟೀವಿಯವರು ಬಂದು ಜಾನ್ ಕ್ವಿಗ್ಲಿಯವರ ಸಂದರ್ಶನ ನಡೆಸಿದರು. ಮರದ ಮೇಲಿನಿಂದ ಇಳಿಯದೇ ಜಾನ್ ಮರದ ಮೇಲಿನಿಂದಲೇ ವಾಕಿಟಾಕಿ ಮೂಲಕ ಸಂದರ್ಶನ ನೀಡಿದರು. ಈ ಸುದ್ದಿ ಮಾಧ್ಯಮಗಳಲ್ಲಿ ಬಿತ್ತರವಾಗಿ, ರಾಷ್ಟ್ರದಾದ್ಯಂತ ಹರಡಿತು.




ಆಗಲೂ ಸರಕಾರ ಮತ್ತು ಅಭಿವೃದ್ಧಿ ಮಂಡಳಿಗಳು ಇತ್ತ ಕಿವಿಗೊಡಲಿಲ್ಲ. ಜಾನ್ ಮರದ ಮೇಲೆ ವಾಸ ಮಾಡಿ ಎಪ್ಪತ್ತೊಂದು ದಿನಗಳು ಕಳೆದುಹೋದವು. ಇದನ್ನು ಅರಿತ ಅಲ್ಲಿನ ಕೋರ್ಟ್ ಮಧ್ಯ ಪ್ರವೇಶಿಸಿತು. ಓಲ್ಡ್ ಗ್ಲೋರಿ ಮರವನ್ನು ಕಡಿಯಬಾರದೆಂದೂ, ಜಾನ್ ಕ್ವಿಗ್ಲಿಯವರನ್ನು ಮರದಿಂದ ಕೆಳಗಿಳಿಸಿ ಅದನ್ನು ಸುರಕ್ಷಿತವಾಗಿ ಬೇರೆಡೆಗೆ ಸ್ಥಳಾಂತರಿಸಬೇಕೆಂದೂ ಸರಕಾರಕ್ಕೆ ಆದೇಶ ಮಾಡಿತು. ಜನವರಿ ಹತ್ತು 2003 ರಂದು ಜಾನ್ ಕ್ವಿಗ್ಲಿಯವರನ್ನು ಮರದ ಮೇಲಿನಿಂದ ಕೆಳಗಿಳಿಸಲಾಯಿತು.

ನಾನೂರು ಕ್ವಿಂಟಲ್ ತೂಕವಿರುವ ಓಲ್ಡ್ ಗ್ಲೋರಿ ಮರವನ್ನು 128 ಚಕ್ರಗಳಿರುವ 16 ಟ್ರಾಲಿಗಳ ಮೇಲೇರಿಸಿ ಐದು ದೊಡ್ಡ ಟ್ರಕ್‌ಗಳ ನೆರವಿನಿಂದ ಒಂದು ಕಿಲೋ ಮೀಟರ್ ದೂರದ ಪಾರ್ಕಿಗೆ ಸಾಗಿಸಲಾಯಿತು. ಈಗ ಓಲ್ಡ್ ಗ್ಲೋರಿ ಮರ ಪುನರ್ಜನ್ಮ ಪಡೆದು ಜೀವಂತವಾಗಿದೆ.

ವ್ಯಕ್ತಿಯೊಬ್ಬರ ದೃಢ ಸಂಕಲ್ಪ ಮತ್ತು ವಿನೂತನ ಹೋರಾಟದ ಫಲದಿಂದ ಪರಿಸರದಲ್ಲಿ ಕಣ್ಮರೆಯಾಗಿ ಹೋಗುತ್ತಿದ್ದ ಮರವೊಂದು ಪುನರ್ಜೀವ ಪಡೆಯಿತು.

ಈಗಲೂ ನಮ್ಮ ಕಣ್ಣೆದುರಿಗೆ ರಸ್ತೆ ನಿರ್ಮಾಣದ ಹೆಸರಿನಲ್ಲಿ ಸಾವಿರ ಸಾವಿರ ಮರಗಳ ಮಾರಣ ಹೋಮ ನಡೆಯುತ್ತಿದೆ. ಇಂಥ ಮರಗಳನ್ನು ಕಾಪಾಡಲು ನಾವೆಂದಾದರೂ ಯೋಚಿಸಿದ್ದೇವೆಯೇ? ಯೋಜಿಸಿದ್ದೇವೆಯೇ? ಪ್ರಯತ್ನಿಸಿದ್ದೇವೆಯೇ? ಎಂದು ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳಬೇಕಾಗಿದ ಸಮಯ ಬಂದಿದೆ, ಅಲ್ಲವೇ? ■